154 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)
ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು

1. ಬೀದರ್ ಜಿಲ್ಲೆಯಲ್ಲಿ ಇರುವ ಕೃಷಿ ಮಾರುಕಟ್ಟೆಗಳ ಸಂಖ್ಯೆ ಎಷ್ಟು; ಅವು ಎಲ್ಲೆಲ್ಲಿ ಇವೆ;

ಬೀದರ್ ಜಿಲ್ಲೆಯಲ್ಲಿ ಇರುವ ಕೃಷಿ ಮಾರುಕಟ್ಟೆಗಳ ಸಂಖ್ಯೆ:5, ಅವುಗಳು ಬೀದರ್, ಭಾಲ್ಕಿ, ಬಸವಕಲ್ಯಾಣ, ಹುಮನಾಬಾದ್ ಮತ್ತು ಔರಾದ್ ಈ ಸ್ಥಳಗಳಲ್ಲಿವೆ.

2. ನಬಾರ್ಡ್ ಅನುದಾನದಿಂದ ಎಪಿಎಂಸಿ ಮಾರುಕಟ್ಟೆಗಳ ವ್ಯಾಪ್ತಿಯಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ, (ಮಾರುಕಟ್ಟೆವಾರು ವಿವರಗಳನ್ನು ಒದಗಿಸುವುದು),

ನಬಾರ್ಡ್ ಅನುದಾನದಿಂದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ವ್ಯಾಪ್ತಿಯಲ್ಲಿ ಗ್ರಾಮೀಣ ಸಂತೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ವಿವರಗಳನ್ನು ಅನುಬಂಧ–1 ರಲ್ಲಿ ಸಲ್ಲಿಸಿದೆ.

3. ರಾಜ್ಯ ಸರ್ಕಾರವು ಇದಕ್ಕಾಗಿ ವೆಚ್ಚ ಮಾಡಲಾಗಿರುವ ಹಣವೆಷ್ಟು; ನಬಾರ್ಡ್‌ನಿಂದ ಬಂದಿರುವ ಹಣವೆಷ್ಟು;

ವಿವರಗಳನ್ನು ಅನುಬಂಧ–1 ರ ಕಾಲಂ–6 ಮತ್ತು 7 ರಲ್ಲಿ ನೀಡಿದೆ.

4. ನಬಾರ್ಡ್ ಅನುದಾನಕ್ಕಾಗಿ ಇನ್ನೂ ಎಷ್ಟು ಪ್ರಸ್ತಾವನೆಗಳು ಸರ್ಕಾರದ ಮುಂದಿವೆ;

ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆಗಳು ಅನುಮೋದನೆಗೆ ಬಾಕಿ ಇರುವುದಿಲ್ಲ

5. ಇಲ್ಲಿನ ಎಪಿಎಂಸಿ ಗಳಲ್ಲಿ ಕೆಲಸ ಮಾಡುತ್ತಿರುವ ಹಮಾಲರ ಕ್ಷೇಮಾಭಿವೃದ್ಧಿಗೆ ಯಾವ ಕ್ರಮಗಳನ್ನು ಕೈಗೊಂಡಿದೆ; ಇವರುಗಳಿಗೆ ಯಾವ ಯಾವ ಸೌಲಭ್ಯವನ್ನು ಒದಗಿಸಲಾಗಿದೆ?

ಹಮಾಲರ ಕ್ಷೇಮಾಭಿವೃದ್ಧಿಗಾಗಿ ರಾಜೀವ್‌ಗಾಂಧಿ ಹೌಸಿಂಗ್ ಯೋಜನೆಯಡಿಯಲ್ಲಿ ಬೀದರ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವ್ಯಾಪ್ತಿಯಲ್ಲಿ 20 ಮನೆಗಳನ್ನು ಹಾಗೂ ಔರಾದ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವ್ಯಾಪ್ತಿಯಲ್ಲಿ 30 ಮನೆಗಳನ್ನು ನಿರ್ಮಿಸಿಕೊಡಲಾಗಿರುತ್ತದೆ.

ಜನಶ್ರೀ ವಿಮಾ ಯೋಜನೆಯಡಿಯಲ್ಲಿ ಹಮಾಲರಿಗೆ ಜೀವವಿಮಾ ಸೌಲಭ್ಯವನ್ನು ಕಲ್ಪಿಸಿದ್ದು, ಸಮಿತಿವಾರು ಫಲಾನುಭವಿಗಳು ಈ ಕೆಳಕಂಡಂತೆ ಇರುತ್ತಾರೆ;

ಬೀದರ್	:	55	ಬಸವಕಲ್ಯಾಣ	:	33
ಔರಾದ್	:	40	ಹುಮನಾಬಾದ್	:	38

ಅನುಬಂಧ–1

ನಬಾರ್ಡ್ ಅನುದಾನದಿಂದ ಆರ್.ಐ.ಡಿ.ಎಫ್. ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ.

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಆರ್.ಐ.ಡಿ.ಎಫ್. ಟ್ರಂಚ್	ಕಾಮಗಾರಿಯ ಹೆಸರು	ಸಮಿತಿಯ ಹೆಸರು	ಯೋಜನಾ ವೆಚ್ಚ	ನಬಾರ್ಡ್ ಅನುದಾನ	ಸಮಿತಿ/ರಾಜ್ಯ ಸರ್ಕಾರದ ಅನುದಾನ	ಷರಾ
1	2	3	4	5	6	7	8
1	ಟ್ರಂಚ್–IX	ಮರತಾಳ್	ಬಸವಕಲ್ಯಾಣ	11.25	10.69	0.58	ಸ್ಥಳದ ಸಮಸ್ಯೆಯಿಂದ ಕೈಬಿಡಲಾಗಿದೆ
2		ಕಟಕ್ ಚಿಂಚೋಳಿ	ಬಾಲ್ಕಿ	11.24	10.88	0.58	ಪೂರ್ಣಗೊಂಡಿದೆ
3		ರಾಜೇಶ್ವರ್	ಬಸವಕಲ್ಯಾಣ	11.25	10.69	0.56	ಪೂರ್ಣಗೊಂಡಿದೆ
4		ಕೊಹಿನೂರ್	ಬಸವಕಲ್ಯಾಣ	11.25	10.69	0.56	ಪೂರ್ಣಗೊಂಡಿದೆ
5		ಜಿಂತಕಿ	ಔರಾದ್	11.25	10.69	0.58	ಪೂರ್ಣಗೊಂಡಿದೆ
6	ಟ್ರಂಚ್–IX	ನಿರ್ಣ	ಹುಮನಾಬಾದ್	10.00	9.50	0.50	ಪೂರ್ಣಗೊಂಡಿದೆ
7		ಖಾನಾಪುರ	ಬಾಲ್ಕಿ	10.00	9.50	0.50	ಪೂರ್ಣಗೊಂಡಿದೆ
8		ಶಾಂತಪುರ	ಔರಾದ್	10.00	9.50	0.50	ಪೂರ್ಣಗೊಂಡಿದೆ
9	ಟ್ರಂಚ್–XII	ಕಮಠಾಣ	ಬೀದರ್	10.00	9.50	0.50	ಪ್ರಗತಿಯಲ್ಲಿದೆ
10		ವಡಗಾಂವ್	ಔರಾದ್	10.00	9.50	0.50	ಮುಗಿಯುವ ಹಂತದಲ್ಲಿದೆ
11		ಬೋಸಗ	ಬಸವಕಲ್ಯಾಣ	10.00	9.50	0.50	ಪೂರ್ಣಗೊಂಡಿದೆ
12		ಬಾತಾಂಬರ	ಬಾಲ್ಕಿ	10.00	9.50	0.50	ಪೂರ್ಣಗೊಂಡಿದೆ

13		ಹಳ್ಳಿಖೇಡ–ಕೆ	ಹುಮನಾಬಾದ್	10.00	9.50	0.50	ಪೂರ್ಣಗೊಂಡಿದೆ
14		ಹಳ್ಳಿಖೇಡ–ಕೆ	ಹುಮನಾಬಾದ್	10.00	9.50	0.50	ಪೂರ್ಣಗೊಂಡಿದೆ
15	ಟ್ರಂಚ್–XIII	ಬಗದಲ್	ಬೀದರ್	10.00	9.50	0.50	ಮುಗಿಯುವ ಹಂತದಲ್ಲಿದೆ
16		ಮರಕುಂದ	ಬೀದರ್	10.00	9.50	0.50	
17		ಮನ್ನಿಕಳ್ಳಿ	ಹುಮನಾಬಾದ್	10.00	9.50	0.50	ಸ್ಥಳದ ಸಮಸ್ಯೆಯಿಂದ ಕೆಲಸ ಪ್ರಾರಂಭಿಸಿರುವುದಿಲ್ಲ
18		ಲಕನಗಾಂವ್	ಬಾಲ್ಕಿ	10.00	9.50	0.50	ಪೂರ್ಣಗೊಂಡಿದೆ
19		ಬಸವಕಲ್ಯಾಣ	ಬಸವಕಲ್ಯಾಣ	15.00	14.25	0.75	ಪ್ರಗತಿಯಲ್ಲಿದೆ
20		ಔರಾದ್	ಔರಾದ್	10.00	9.50	0.50	ಪೂರ್ಣಗೊಂಡಿದೆ
			ಒಟ್ಟು	211.24	200.89	10.55	